ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ ನಿರ್ದೇಶನಾಲಯ

ಸಂ ಕೆ.ಎಸ್.ಐ.ಸಿ.ಪಿಎಸ್/ಕೋವಿಡ್-19/2020-21 ದಿನಾಂಕ: 16/04/2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾಘಟಕ
ಎಲ್ಲಾ ಜಿಲ್ಲೆಗಳು

ಮಾನ್ಯರೇ,

ವಿಷಯ: ಕೋವಿಡ್-19 ಸಾಂಕ್ರಾಮಿಕವಾಗಿರುವ ಹಿನ್ನೆಲೆಯಲ್ಲಿ ಫಾಸ್ಟರ್‌ಕೇರ್ ನಲ್ಲಿ ನೀಡಿರುವ ಮಕ್ಕಳ ಪಾಲನೆ ಮತ್ತು ರಕ್ಷಣೆ ಕುರಿತು.

ಉಲ್ಲೇಖ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕೋವಿಡ್-19ರ ಸುಮೋಟೋ ರಿಟ್ ಅರ್ಜಿ(ಸಿವಿಲ್) ಸಂ 4, 2020 ದಿನಾಂಕ:03.04.2020

*****

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೋವಿಡ್-19 ಸಾಂಕ್ರಾಮಿಕವಾಗಿರುವ ಹಿನ್ನೆಲೆಯಲ್ಲಿ ಸುಮೋಟೋ ರಿಟ್ ಅರ್ಜಿ (ಸಿವಿಲ್) ಸಂ.4, 2020 ರ ಆದೇಶವನ್ನು ದಿನಾಂಕ:03.04.2020ರಂದು ಹೊರಡಿಸಿದ್ದು, ಸದರಿ ಆದೇಶದ ಆಂಗ್ಲ ಹಾಗೂ ಕನ್ನಡ ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ ವಾಟ್ಸಪ್ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಸದರಿ ಆದೇಶದಲ್ಲಿ ಸೂಚಿಸಿರುವಂತೆ ಕುಟುಂಬ ಫಾಸ್ಟರ್ ಪಾಲನೆ ಹಾಗು ಗುಂಪು ಫಾಸ್ಟರ್ ಪಾಲನೆಯಲ್ಲಿರುವ ಮಕ್ಕಳ ಪಾಲನೆ ಮತ್ತು ರಕ್ಷಣೆ ಕುರಿತು ಮೇಲ್ವಿಚಾರಣೆ ಅಗತ್ಯವಿದ್ದು ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ಕೆಳಕಂಡಂತೆ ತಿಳಿಸಿದೆ.

**ಫಾಸ್ಟರ್‌ಕೇರ್‌ನಡಿ ನೀಡಿರುವ ಮಕ್ಕಳ ಕುರಿತ ಮೇಲ್ವಿಚಾರಣೆ**

**ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುವುದು:**

**I. ಫಾಸ್ಟರ್ ಕೇರ್ ಅಡಿಯಲ್ಲಿ ನೀಡಿರುವ ಮಕ್ಕಳ ಮಾಹಿತಿಯನ್ನು ನಿರ್ವಹಿಸುವುದು**

1) ಜಿಲ್ಲೆಯಲ್ಲಿ ಫಾಸ್ಟರ್‌ಕೇರ್ ಅಡಿ ನೀಡಿರುವ ಮಕ್ಕಳ ಮಾಹಿತಿಯನ್ನು ಮಕ್ಕಳ ಕಲ್ಯಾಣ ಸಮಿತಿಯೊಡನೆ ಚರ್ಚಿಸಿ ಪಟ್ಟಿ ಮಾಡುವುದು. ಹಾಗೂ ಈ ಬಗ್ಗೆ ಕೇಂದ್ರ ಕಛೇರಿಗೆ **ಅನುಬಂಧ 1, 2 & 3 ರಲ್ಲಿ** ಮಾಹಿತಿ ನೀಡುವುದು)
2) ಮಕ್ಕಳ ಪೋಷಕರ ದೂರವಾಣಿ ಸಂಖ್ಯೆ ಗುರುತು ಮಾಡಿಕೊಳ್ಳುವುದು.

**II. ಫಾಸ್ಟರ್ ಕೇರ್ ಅಡಿ ನೀಡಿರುವ ಮಕ್ಕಳಿಗೆ ಮತ್ತು ಫಾಸ್ಟರ್ ಕೇರ್ ಪೋಷಕರಿಗೆ ಕೋವಿಡ್-19ರ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು**

1) ಕೋವಿಡ್ 19 ಸೋಂಕು ಕುರಿತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕೈಪಿಡಿ ಸಿದ್ಧಪಡಿಸುವುದು. (ಈಗಾಗಲೇ ಲಭ್ಯವಿದ್ದಲ್ಲಿ ಅದನ್ನೆ ಬಳಸುವುದು). ಮುನ್ನೆಚ್ಚರಿಕಾ

REDMI NOTE 8
AI QUAD CAMERA

ಮಾಹಿತಿಯನ್ನು ವಾಟ್ಸಪ್ ಅಥವಾ ದೂರವಾಣಿ ಮೂಲಕ ಫಾಸ್ಟರ್ ಕೇರ್ ಮಕ್ಕಳಿಗೆ ಹಾಗೂ ಫಾಸ್ಟರ್ ಕೇರ್ ಪೋಷಕರಿಗೆ ತಿಳಿಸುವುದು.

2) ಫಾಸ್ಟರ್ ಕೇರ್ ಮಕ್ಕಳನ್ನು ಮತ್ತು ಅವರ ಪೋಷಕರನ್ನು ಕನಿಷ್ಠ ವಾರಕ್ಕೆ 2 ಬಾರಿ ದೂರವಾಣಿ ಮೂಲಕ (ವಾಟ್ಸಪ್ ವೀಡಿಯೋ ಮೂಲಕ) ಕುಟುಂಬದವರನ್ನು ಸಂಪರ್ಕಿಸಿ, ಕೋವಿಡ್-19 ಬಗೆಗಿನ ಮುನ್ನೆಚ್ಚರಿಕಾ ಕ್ರಮಗಳು ಅನುಪಾಲನೆಯಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿದ್ದು, ಈ ಕರ್ತವ್ಯವನ್ನು ನಿರ್ವಹಿಸಲು ಮಕ್ಕಳ ಸಂಖ್ಯೆಗನುಗುಣವಾಗಿ ಘಟಕದ ಅಧಿಕಾರಿಗಳಿಗೆ (ರಕ್ಷಣಾ ಅಧಿಕಾರಿಗಳು ಸಾಂಸ್ಥಿಕ, ಅಸಾಂಸ್ಥಿಕ, ಸಮಾಲೋಚಕರು, ಸಮಾಜ ಕಾರ್ಯಕರ್ತರು) ಫಾಲೋಅಪ್ ಕೆಲಸವನ್ನು ಹಂಚಿಕೆ ಮಾಡುವುದು. ಸದರಿ ಅಧಿಕಾರಿಗಳು ತಮಗೆ ಹಂಚಿಕೆಯಾದ ಮಕ್ಕಳು ಮತ್ತು ಅವರ ಕುಟುಂಬದವರೊಂದಿಗೆ ದೂರವಾಣಿ ಹಾಗೂ ವೀಡಿಯೋ ಕಾಲ್ಸ್ ಮೂಲಕ ಕನಿಷ್ಟ ವಾರಕ್ಕೆ 2 ಬಾರಿ ಫಾಲೋಅಪ್ ಮಾಡಿ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳು ಅನುಪಾಲನೆಯಾಗುತ್ತಿರುವ ಬಗ್ಗೆ **ಅನುಬಂಧ-4**ರಲ್ಲಿ ತಿಳಿಸಿದ ನಿಗದಿತ ವಹಿಯಲ್ಲಿ ಅನುಪಾಲನಾ ಮಾಹಿತಿ ದಾಖಲಿಸುವುದು.

3) ಕೋವಿಡ್ ಸೋಂಕು ಕುರಿತು, ಅದರ ಲಕ್ಷಣಗಳು, ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ಸಂಪರ್ಕಿಸಬೇಕಾದವರ ಮಾಹಿತಿ, ಸಹಾಯವಾಣಿ ಸಂಖ್ಯೆ ಕುರಿತು ವಿಡಿಯೋ ಮಾಡಿ ವಾಟ್ಸಆಪ್ ಮೂಲಕ ಎಲ್ಲಾ ಫಾಸ್ಟರ್ ಪೋಷಕರಿಗೆ ಕಳುಹಿಸುವುದು.

4) ಸಮಾಲೋಚಕರೂ ವಾಟ್ಸಆಪ್ ವೀಡಿಯೋ ಮೂಲಕ ಮಕ್ಕಳು ಹಾಗೂ ಫಾಸ್ಟರ್ ಪೋಷಕರೊಂದಿಗೆ ಆಗಿಂದಾಗ್ಗೆ ಮಾತಾನಾಡುವುದು.

## III. ಫಿಟ್ ಫೆಸಿಲಿಟಿನಲ್ಲಿರುವ ಗುಂಪು ಫಾಸ್ಟರ್‌ಕೇರ್ ಅಡಿಯಲ್ಲಿರುವ ಮಕ್ಕಳ ವಿಷಯದಲ್ಲೂ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳು ಅನುಪಾಲನೆ ಮಾಡುವುದು

1) ಮಕ್ಕಳನ್ನು ಗುಂಪು ಫಾಸ್ಟರ್‌ಕೇರ್ ನಡಿ ಪಡೆದಿರುವ ಫಿಟ್ ಫೆಸಿಲಿಟಿಯನ್ನು ಸಹ ಕನಿಷ್ಠ ವಾರಕ್ಕೆ 2 ಬಾರಿ ಸಂಪರ್ಕಿಸುವುದು ಹಾಗೂ ಸದರಿ ಫಿಟ್ ಫೆಸಿಲಿಟಿಯಲ್ಲಿಯೂ ಸಹ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳು ಅನುಪಾಲನೆಯಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಹಾಗೂ ಇದನ್ನು ನಿಗದಿತ ವಹಿಯಲ್ಲಿ ನಮೂದಿಸುವುದು.

## IV. ಕುಟುಂಬ ಫಾಸ್ಟರ್ ಕೇರ್ ಹಾಗೂ ಗುಂಪು ಫಾಸ್ಟರ್ ಕೇರ್‌ನಲ್ಲಿರುವ ಮಕ್ಕಳೊಂದಿಗೆ ಆಗಿಂದಾಗ್ಗೆ ಸಂಪರ್ಕದಲ್ಲಿರುವಾಗ ಹಸ್ತಕ್ಷೇಪದ ಅವಶ್ಯವಿದ್ದರೆ ಅದರಂತೆ ಕ್ರಮ ಕೈಗೊಳ್ಳುವುದು

1) ಫಾಸ್ಟರ್ ಕೇರ್ ಮಕ್ಕಳು ಮತ್ತು ಫಾಸ್ಟರ್ ಕೇರ್ ಪೋಷಕರೊಡನೆ ಮೇಲೆ ತಿಳಿಸಿದಂತೆ ವಾರಕ್ಕೆ 2 ಬಾರಿ ಮಾತನಾಡಿದಾಗ ಹಸ್ತಕ್ಷೇಪದ (intervention) ಅಗತ್ಯವಿರುವುದು ಕಂಡುಬಂದಲ್ಲಿ ಅದರಂತೆ ಅಗತ್ಯ ಕ್ರಮ ತೆಗೆದುಕೊಳ್ಳುವುದು. ಅಗತ್ಯವಿದ್ದಲ್ಲಿ ಕೇಂದ್ರ ಕಚೇರಿಯನ್ನು ಸಂಪರ್ಕಿಸುವುದು.

REDMI NOTE 8
AI QUAD CAMERA

REDMI NOTE 8
AI QUAD CAMERA

**V. ಕೋವಿಡ್-19ರ ಹಿನ್ನೆಲೆಯಲ್ಲಿ ಫಾಸ್ಟರ್ ಕೇರ್ ಅಡಿ ನೀಡಿರುವ ಮಕ್ಕಳ ಹಾಗೂ ಫಾಸ್ಟರ್ ಕುಟುಂಬದ ಸದಸ್ಯರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಅವಶ್ಯ ಬೆಂಬಲವನ್ನು ನೀಡುವುದು.**

1) ಮಕ್ಕಳ ಆರೋಗ್ಯ ಸ್ಥಿತಿ ಬಗ್ಗೆ ವಿಚಾರಿಸಿ ದಾಖಲಿಸುವುದು. ಮಗುವಿನಲ್ಲಿ ಕೋವಿಡ್ 19 ರ ಲಕ್ಷಣಗಳು ಕಂಡುಬಂದಲ್ಲಿ, ಅನುಸರಿಸಬೇಕಾದ ಕ್ರಮದ ಕುರಿತು ಮಾಹಿತಿ ನೀಡುವುದು.
2) ಫಾಸ್ಟರ್ ಕೇರ್‌ಗೆ ನೀಡಿರುವ ಕುಟುಂಬದ ಸದಸ್ಯರುಗಳಲ್ಲಿ ಕೋವಿಡ್ 19ರ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳನ್ನು ಸಂಪರ್ಕಿಸುವಂತೆ ತಿಳಿಸುವುದು.
3) ಮಗುವಿಗೆ ಯಾವುದೇ ಆರೋಗ್ಯದ ಸಮಸ್ಯೆ ಉಂಟಾದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಸಿಬ್ಬಂದಿಯನ್ನು ಮತ್ತು ಮಕ್ಕಳ ಕಲ್ಯಾಣ ಸಮಿತಿ ಇವರನ್ನು ಸಂಪರ್ಕಿಸುವಂತೆ ತಿಳಿಸಿ ಸಂಬಂಧಪಟ್ಟ ಎಲ್ಲಾ ಅಗತ್ಯ ದೂರವಾಣಿ ಸಂಖ್ಯೆಗಳು ಫಾಸ್ಟರ್ ಕೇರ್ ಪೋಷಕರಿಗೆ ಲಭ್ಯವಿರುವಂತೆ ನೋಡಿಕೊಳ್ಳುವುದು.

**VI. ಫಾಸ್ಟರ್ ಕೇರ್‌ಗೆ ನೀಡಿರುವ ಮಕ್ಕಳ ವಿಷಯದಲ್ಲಿ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳು ಅನುಪಾಲನೆಯಾಗುತ್ತಿರುವ ಬಗ್ಗೆ ಕೇಂದ್ರ ಕಛೇರಿಗೆ ನಿಯಮಿತವಾಗಿ ವರದಿ ಸಲ್ಲಿಸುವುದು.**

1) ಕೋವಿಡ್ ಸಾಂಕ್ರಮಿಕ ಸಹಜ ಸ್ಥಿತಿಗೆ ಬರುವವರೆಗೆ ಫಾಸ್ಟರ್ ಕೇರ್‌ನಲ್ಲಿರುವ ಪ್ರತಿಯೊಂದು ಮಗುವಿಗೆ ವಾರಕ್ಕೆ 2 ಬಾರಿ ಸಂಪರ್ಕಿಸಿ, ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಹಾಗೂ ಈ ಬಗ್ಗೆ ನಿಗದಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಮಾಹಿತಿಯನ್ನು ಸಲ್ಲಿಸುವುದು. **(ಅನುಬಂಧ-5)**

**VII. ಕೋವಿಡ್-19ರ ಹಿನ್ನೆಲೆಯಲ್ಲಿ ಫಾಸ್ಟರ್‌ಕೇರ್ ಅಡಿಯಲ್ಲಿ ನೀಡಿರುವ ಮಕ್ಕಳು, ಫಾಸ್ಟರ್ ಕುಟುಂಬದ ಸದಸ್ಯರು ಹಾಗೂ ಮಗುವಿನ ಜೈವಿಕ ಪೋಷಕರು ಇವರ ಮಧ್ಯೆ ಅಪೇಕ್ಷಿತ ಸಂಪರ್ಕ**

1) ಮಗು ತನ್ನ ಜೈವಿಕ ತಂದೆತಾಯಿಯರೊಡನೆ ಸಂಪರ್ಕ ಹೊಂದಿದ್ದಾರೆಯೇ? ಹೊಂದಿದ್ದಲ್ಲಿ ದೂರವಾಣಿ ಮೂಲಕ ಕನಿಷ್ಠ ವಾರಕ್ಕೆರಡು ಬಾರಿಯಾದರೂ ಸಂಪರ್ಕ ಕಲ್ಪಿಸಿರುವ ಬಗ್ಗೆ ಮಾಹಿತಿ ಪಡೆಯುವುದು.
2) ಫಾಸ್ಟರ್‌ಕೇರ್ ಪೋಷಕರು ಮಗುವನ್ನು ಮನೆಯಿಂದ ಹೊರಗೆ ಕಳುಹಿಸದಂತೆ ಎಚ್ಚರ ವಹಿಸುವುದು.
3) ಫಾಸ್ಟರ್ ಪೋಷಕರ ಮನೆಗೆ ಫಾಸ್ಟರ್ ಪೋಷಕರ ಸಂಬಂಧಿಕರಾಗಲೀ ಅಥವಾ ಮಗುವಿನ ಜೈವಿಕ ಪೋಷಕರನ್ನು ಹೊರತುಪಡಿಸಿ ಬೇರೆ ಯಾವ ಸಂಬಂಧಿಕರಾಗಲೀ ಫಾಸ್ಟರ್ ಕೇರ್ ಮನೆಗೆ ಭೇಟಿ ನೀಡುವುದನ್ನು ತಡೆಯುವಂತೆ ತಿಳಿಸುವುದು.
4) ಮಗು ಜೈವಿಕ ಪೋಷಕರನ್ನು ನೋಡಲೇಬೇಕೆಂದು ಬಯಸಿದ್ದಲ್ಲಿ, ಜೈವಿಕ ಪೋಷಕರು ಮಗು ಇರುವ ಸ್ಥಳಕ್ಕೆ ಬರಬೇಕೇ ಹೊರತು ಮಗುವನ್ನು ಜೈವಿಕ ಪೋಷಕರಿರುವ ಸ್ಥಳಕ್ಕೆ ಕರೆದುಕೊಂಡು ಹೋಗಬಾರದು. ಏಕೆಂದರೆ ಮಕ್ಕಳಿಗೆ ರೋಗ ನಿರೋಧಕ ಶಕ್ತಿ ಕಡಿಮೆ ಇರುವುದರಿಂದ ಮಕ್ಕಳು ಪ್ರಯಾಣ ಮಾಡಬಾರದು. ಮಗುವಿನ ಜೈವಿಕ ಪೋಷಕರ

ಭೇಟಿ ಸಮಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ತಡೆಗಟ್ಟುವ ಕುರಿತು ನೀಡಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು. ಅಂದರೆ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು, ಸಾಬೂನು ಮತ್ತು ನೀರಿನಿಂದ ಕನಿಷ್ಠ 20 ಸೆಕೆಂಡುಗಳವರೆಗೆ ಕೈಗಳನ್ನು ತೊಳೆಯುವುದು. ಇತ್ಯಾದಿ. ಭೇಟಿ ಪೂರ್ವದಲ್ಲಿ ಜೈವಿಕ ಪೋಷಕರಿಗೆ ಸೋಂಕು ಇಲ್ಲದಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

ಕೋವಿಡ್–19 ಮಹಾಮಾರಿಯು ಎಲ್ಲೆಡೆ ಹರಡುತ್ತಿರುವ ಹಿನ್ನೆಲೆಯಲ್ಲಿ ಈಗಾಗಲೇ ಸರ್ಕಾರದ ಅನುದಾನ ಪಡೆಯುತ್ತಿರುವ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್–19 ತಡೆಗಟ್ಟಲು ಮುನ್ನೆಚ್ಚರಿಕಾ ಕ್ರಮಗಳ ಅನುಪಾಲನೆ ಬಗ್ಗೆ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಇದೇ ರೀತಿಯಲ್ಲಿ ಮೇಲೆ ವಿವರಿಸಿದಂತೆ ಪಾಸ್ಟರ್ ಕೇರ್ ಅಡಿಯಲ್ಲಿ ನೀಡಿರುವ ಮಕ್ಕಳ ವಿಷಯದಲ್ಲೂ ಹಾಗೂ ಎಲ್ಲಾ ಫಾಸ್ಟರ್ ಪೋಷಕರ ಕುಟುಂಬಗಳ ವಿಷಯದಲ್ಲೂ ಕೋವಿಡ್–19ಗೆ ಸಂಬಂಧಪಟ್ಟ ಮುನ್ನೆಚ್ಚರಿಕಾ ಕ್ರಮಗಳು ಅನುಸರಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ಈ ಪತ್ರದೊಂದಿಗೆ ನೀಡಲಾದ ಅನುಬಂಧಗಳಲ್ಲಿ ಅವಶ್ಯಕ ಮಾಹಿತಿಯನ್ನು ಕೇಂದ್ರ ಕಛೇರಿಗೆ 3 ದಿನಗಳೊಳಗೆ ನೀಡಲು ತಿಳಿಸಿದೆ.

16.04.2020

ನಿರ್ದೇಶಕರು

ಸಮಗ್ರ ಮಕ್ಕಳ ರಕ್ಷಣಾ ಯೋಜನೆ,

ಬೆಂಗಳೂರು

REDMI NOTE 8
AI QUAD CAMERA